**2**ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ
ನ್ಯಾಯಾಲಯ**,** ಪಾಂಡವಪುರ

ಸಿ.ಸಿ. ನಂಬ್ರ: **1014/2021** ಸಿ.ಡಬ್ಲ್ಯೂ: **3** ಪಿ.ಡಬ್ಲ್ಯೂ:**3**

ಸಾಕ್ಷಿದಾರರ ಹೇಳಿಕೆಗಳು **-**

ಸಾಕ್ಷಿಯ ಹೆಸರು - ಲಕ್ಷ್ಮೀನರಸಿಂಹ್ನೇಗೌಡ
ತಂದೆಯ ಹೆಸರು - ನರಸೇಗೌಡ
ವಯಸ್ಸು - 62 ವರ್ಷ
ಉದ್ಯೋಗ - ವ್ಯವಸಾಯ
ವಾಸ ಸ್ಥಳ - ಮೇಲುಕೋಟೆ
ಪಾಂಡವಪುರ ತಾಲೂಕು.

ದಿನಾಂಕ: 24.07.2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ:

ಚಾಸಾ-1 ನನ್ನ ಅಣ್ಣನ ಮಗ, ಚಾಸಾ-2, 4 ಮತ್ತು ಚಾಸಾ-5 ಗೊತ್ತು. ಆರೋಪಿತರು ನನಗೆ ಗೊತ್ತು. ಅವರು ನನ್ನ ಸಂಬಂಧಿಕರು.

2. ಚಾಸಾ-1 ಮತ್ತು ಅವರ ಹೆಂಡತಿಯಾದ 2ನೇ ಆರೋಪಿಯ ನಡುವೆ ಕೌಟುಂಬಿಕ ವಿವಾದಗಳಿದ್ದು, ಪಂಚಾಯತಿಗೆ ಎಂದು ನನ್ನನ್ನು ದಿನಾಂಕ 09.11.2020 ರಂದು ಕರೆದಿರುತ್ತಾರೆ, ಅದರಂತೆ ನಾನು ಚಾಸಾ-1 ರವರು ವಾಸವಾಗಿರುವ ವಿಶ್ವೇಶ್ವರ ನಗರದ ಅವರ ಮನೆಗೆ ಹೋದಾಗ ಅಲ್ಲಿಗೆ ಚಾಸಾ-2, 4 ಮತ್ತು 5 ರವರು ಸಹಾ ಇದ್ದರು, ಪಂಚಾಯತಿಯಲ್ಲಿ ನಾವುಗಳು ಮಾತನಾಡುತ್ತಿದ್ದಾಗ, 1 ನೇ ಆರೋಪಿ ಯಾಕೆ ಇವರನ್ನೆಲ್ಲಾ ಪಂಚಾಯತಿಗೆ ಕರೆಸಿದ್ದೀಯಾ ಎಂದು ಚಾಸಾ-1 ರವರಿಗೆ ಬೋಳಿ ಮಗನೇ ಸೂಳೆ ಮಗನೇ ಎಂದು ಬೈದು, ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡರು. ಆಗ 3 ನೇ ಆರೋಪಿ ಬಂದು ಚಾಸಾ-1 ರವರನ್ನು ಕಾಲಿಂದ ಒದ್ದು, ಕೈಗಳಿಂದ ಹೊಡೆದಿರುತ್ತಾರೆ.

ನಂತರ 3 ಜನ ಮಹಿಳೆಯರು ಅವರು ಹೆಸರು ನನಗೆ ಈಗ ನೆನಪಿಲ್ಲ. ಇವನನ್ನು ಬಿಡಬೇಡಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿ ಎಂದು ಹೇಳಿರುತ್ತಾರೆ. ಆಗ ನಾವು ಪಂಚಾಯತಿ ಮಾಡಿರುವುದಿಲ್ಲ, ಎಲ್ಲರೂ ಅವರವರ ಪಾಡಿಗೆ ಹೊರಟು ಹೋದರು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದರು. ಈ ಹಂತದಲ್ಲಿ 2 ನೇ ಆರೋಪಿ ಗೈರು ಹಾಜರಾಗಿದ್ದು, ಗುರುತಿಸುವಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ.

**(**ಈ ಹಂತದಲ್ಲಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಮಾನ್ಯ ಸ**.**ಸ**.**ಅ**.** ರವರು ವಿನಂತಿಸಿಕೊಂಡ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**)**

<u>ಪಾಟಿ ಸವಾಲು ಮಾನ್ಯ ಸ ಸ ಅ ರವರಿಂದಃ-</u>

2, 4, 6 ನೇ ಆರೋಪಿತರು ಚಾಸಾ-1 ರವರಿಗೆ ಕೈಗಳಿಂದ ಗುದ್ದಿರುತ್ತಾರೆ ಎಂದರೆ ಸರಿ. ಆರೋಪಿತರು ಕೊಲೆ ಮಾಡುವುದಾಗಿ ಚಾಸಾ-1 ರವರಿಗೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾವುಗಳು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಗಲಾಟೆಯ ಸಮಯದಲ್ಲಿ ಚಾಸಾ-1 ರವರ ಮೊಬೈಲ್ ಮತ್ತು ಚೈನನ್ನು ಬಿದ್ದಿದ್ದು ನಾನು ಚಾಸಾ-1 ರವರಿಗೆ ತೆಗೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲು ಆರೋಪಿತರ ಪರ ವಕೀಲರಾದ ಶ್ರೀ ಬಿ ಎಸ್ ವಕೀಲರಿಂದಃ-</u>

ಚಾಸಾ-1 ಮತ್ತು 2 ನೇ ಆರೋಪಿ ಮಕ್ಕಳೊಂದಿಗೆ ಹರಳಹಳ್ಳಿ ಗ್ರಾಮದಲ್ಲಿ ಚಾಸವಾಗಿದ್ದು, ಫುಡ್ ಪ್ಯಾಕ್ಟರಿಯನ್ನು ನಡೆಸುತ್ತಿದ್ದರು ಎಂದರೆ ಸರಿ. ಪ್ಯಾಕ್ಟರಿ ನಡೆಸುತ್ತಿರುವ ಜಾಗವು 2 ನೇ ಆರೋಪಿ ಹೆಸರಿನಲ್ಲತ್ತು ಎಂದರೆ ಸಾಕ್ಷಿ ಕೆಲವು ಆಸ್ತಿಗಳನ್ನು ಚಾಸಾ-1 ರವರು ಆತನ ಹೆಂಡತಿಯ ಹೆಸರಿಗೆ ಮಾಡಿರುತ್ತಾರೆ, ಕೆಲವು ಆಸ್ತಿಗಳು ಚಾಸಾ-1 ರವರ ಹೆಸರಿನಲ್ಲಿದ್ದವು. ಪೋಲಿಸರಿಗೆ ನೀಡಿರುವ ಹೇಳಿಕೆಯನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ.

2. ಚಾಸಾ-1 ರವರು ನನ್ನ ಅಣ್ಣನ ಮಗನಾದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ಮತ್ತು ಅವರ ಕುಟುಂಬದವರ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮತ್ತು ಅವರ ಮಕ್ಕಳು ಅವರ ತವರು ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರ ಮನೆಗೆ ಹೋಗುತ್ತಿದ್ದರು, ಬರುತ್ತಿದ್ದರು. ದಿನಾಂಕ 09.11.2020 ರಂದು 2 ನೇ ಆರೋಪಿ ಮತ್ತು ಮಕ್ಕಳು ಅವರ ಊಟ, ವಿದ್ಯಾಭ್ಯಾಸ ಮತ್ತು ಆರೋಗ್ಯದ ಖರ್ಚನ್ನು ನೋಡಿಕೊಳ್ಳುತ್ತಿಲ್ಲ ಎಂದು ಚಾಸಾ-1 ರವರ ಬಳಿ ಬಂದಿರುತ್ತಾರೆ ಎಂದರೆ ಸಾಕ್ಷಿ ಚಾಸಾ-1 ರವರೇ 2 ನೇ ಆರೋಪಿ ಮತ್ತು ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು.

3. 2 ನೇ ಆರೋಪಿಯನ್ನು ಹೊಡೆದು ಚೆಕ್ಕುಗಳಲ್ಲಿ ಒತ್ತಾಯ ಪೂರ್ವಕವಾಗಿ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಚಾಸಾ-1 ರವರು ವ್ಯಾಪಾರ ಮಾಡಿ 2 ನೇ ಆರೋಪಿಯ ಖಾತೆಗೆ ಹಣ ಹಾಕುತ್ತಿದ್ದರು, ಆದ್ದರಿಂದ ನಾವು ಪಂಚಾಯತಿ ಮಾಡಿ ಚೆಕ್ಕುಗಳನ್ನು ಬರೆದುಕೊಡಬೇಕು ಎಂದು ಹೇಳಿರುತ್ತೇವೆ. ಈ ವಿಚಾರವನ್ನು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಘಟನೆಯನ್ನು ಮಾತ್ರ ಪೋಲಿಸರು ಕೇಳಿರುತ್ತಾರೆ, ಆದ್ದರಿಂದ ನಾನು ಈ ಘಟನೆಯ ಬಗ್ಗೆ ಮಾತ್ರ ಹೇಳಿಕೆ ನೀಡಿರುತ್ತೇನೆ. ಚಾಸಾ-1 ರವರು ನನ್ನ ಅಣ್ಣನ ಮಗನಾದ ಕಾರಣ ಆರೋಪಿತರು ಹಲ್ಲೆ ಮಾಡದೇ ಇದ್ದರೂ ಹಲ್ಲೆ ಮಾಡಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆರೋಪಿತರು ಚಾಸಾ-1 ರವರ ಮೇಲೆ ಕೈಗಳಿಂದ ಹಲ್ಲೆ ಮಾಡಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ, ಅವಾಚ ಶಬ್ದಗಳಿಂದ ಬೈದಿರುವುದಿಲ್ಲ. ಚಾಸಾ-1 ರವರು 2 ನೇ ಆರೋಪಿಗೆ ಹಲ್ಲೆ ಮಾಡಿ ಗಾಯಪಡಿಸಿದ್ದು, ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ನ್ಯಾಯಾಲಯ, ಪಾಂಡವಪುರ